International Journal of Kannada Research 2023; 9(1): 231-234




International Journal of Kannada Research
www.kannadajournal.com

**ISSN: 2454–5813**
IJKR 2023; 9(1): 231-234
© 2023 IJKR
www.kannadajournal.com
Received: 08-12-2022
Accepted: 12-01-2023

**Dr. Sanjeev R Nayak**
M.A. Mphil, Ph.d, Dgs.,
KLE Society's, Shri Gudleppa
Hallikeri Arts Science And
Commerce College, Havari,
Karnataka, India

**Corresponding Author:**
**Dr. Sanjeev R Nayak**
M.A. Mphil, Ph.d, Dgs.,
KLE Society's, Shri Gudleppa
Hallikeri Arts Science And
Commerce College, Havari,
Karnataka, India

# ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ತುಂಡು ಬೂತೊಳು (ಉಪದೈವಗಳು)

**Dr. Sanjeev R Nayak**

**ಪೀಠಿಕೆ**

ಭೂತಾರಾಧನೆ, ಯಕ್ಷಾರಾಧನೆ, ನಾಗಾರಾಧನೆಗಳು ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ವಿಶಿಷ್ಟ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಮಾನ್ಯ ದೈವೊಳು, ನೂತ್ತೊಂಜಿ ದೈವೊಳು, ಒಂಜಿ ಕಮ್ಮಿ ನಲ್ಪ ದೈವೊಳು ಇತ್ಯಾದಿಯಾಗಿ ಭೂತಗಳಿಗೆ ಸಮೂಹದಲ್ಲಿ ಆರಾಧನೆ ಸಲ್ಲಿಸುತ್ತಾರೆ. ಹೀಗೆ ಸಮೂಹದಲ್ಲಿ ಆರಾಧನೆಗೊಳ್ಳುವಾಗ ಎಲ್ಲ ದೈವಗಳಿಗೆ ನೇಮ ಇರುವುದಿಲ್ಲ. ಪ್ರಸಿದ್ಧವಾದ ರುದ್ರ ಚಾಮುಂಡಿ, ಉಳ್ಳಾಕುಲು, ಗುಳಿಗ, ಪಂಜುರ್ಲಿ, ಕಲ್ಕುಡ–ಕಲ್ಲುರ್ಟಿ ಮೊದಲಾದ ದೈವಗಳಿಗೆ ಸಂಧಿ ಹೇಳಿ ನೇಮ ನೀಡುತ್ತಾರೆ. ಈ ಪ್ರಧಾನ ದೈವಗಳೊಂದಿಗೆ ಪುದ, ಕನ್ನಡ ಬೀರ, ಕುಲೆ ಪೆರ್ಗಡೆ, ಕುಲೆ ಬಂಟೆತ್ತಿ, ಜತೆಕುಲೆ, ಬ್ರಾಣ ಭೂತ, ಮಾಣಿ, ಅಜ್ಜ ಬಳಯ ಮಾಣಿ ಗೋವಿಂದ, ಎರು ಬಂಟ, ಎರು ಶೆಟ್ಟಿ, ಉರವ, ಪರವ ಭೂತೊ, ಕಚ್ಚೆ ಭಟ್ಟ ಕುಂಟಿಕಾನ ಕೊರವ, ಕೂಜಿಲು, ಬೇಡವ ಭವನೊ, ಬೂಡು ಬೊಮ್ಮಯ, ಮದನಕೆ ದೈಯಾರು, ಅಕ್ಕ ಬೋಳಾರಿಗೆ, ಒಲಿ ಪ್ರಾಂಡಿ, ದೈವನ ಮುಟ್ಟುನಾಯೆ, ದೈವಸಾದಿಗೆ, ಅಡ್ಡೊಳ್ತಾಯೆ, ದಾರು, ಕುಂದಯ, ಮಾಪುಳೆ, ಮಾಪುಳ್ತಿ ದೈವಗಳು, ಪಿಲೆ ಪೆಲತ್ತಿ ಪರಿವಾರ ನಾಯಕ, ಮರ್ಲು ಮಾಣಿ, ಪೋತಾಳ, ಮಂಜನ ನಾಯಕ ಮೊದಲಾದ ಅನೇಕ ಸೇರಿಗೆ ದೈವಗಳಿಗೆ ಆರಾಧನೆ ಇದ್ದು, ಈ ದೈವಗಳಿಗೆ ಕಟ್ಟು ಕಟ್ಟಳೆಗೆ ನಾಮಕಾವಾಸ್ತೆ ಹೆಸರು ಹೇಳಿ ಪ್ರಧಾನ ದೈವಗಳ ವೇಷ ಭೂಷಣದಲ್ಲಿ ತುಸು ವ್ಯತ್ಯಾಸ ಮಾಡಿ ನೇಮ ಸಲ್ಲಿಸುತ್ತಾರೆ. ಸಮೂಹ ದೈವಗಳ ಆರಾಧನೆಯಲ್ಲಿ ಎಲ್ಲ ದೈವಗಳ ಹೆಸರು ಸಿಗುವುದಿಲ್ಲ. ಕೆಲವು ದೈವಗಳ ಹೆಸರು ಸಿಕ್ಕಿದರೂ ಪಾಡ್ದನ, ಐತಿಹ್ಯ, ಮೂಲ ವೇಷ ಭೂಷಣಗಳು ಲಭ್ಯವಿರುವುದಿಲ್ಲ. ಇಂಥಹ ಕೆಲವು ದೈವಗಳ ಕುರಿತು ನಾನು ಮಾಹಿತಿ ಸಂಗ್ರಹಿಸಿದ್ದು ಮುಂದೆ ಅದರ ವಿಚಾರವನ್ನು ಮಂಡಿಸುತ್ತೇನೆ. ಅಂತೆಯೇ ಕೆಲವು ದೈವಗಳು ಪ್ರಧಾನ ದೈವಗಳಾಗಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ಆರಾಧಿಸಲ್ಪಡುವ ಈ ದೈವಗಳ ಆರಾಧನೆ ಇನ್ನೂ ಸರಿಯಾದ ರೀತಿಯಲ್ಲಿ ದಾಖಲಾಗಿಲ್ಲ. ದಾಲ್ಲೂರಾಯ, ಮಾಲಿಂಗರಾಯ, ದುಗ್ಗಲಾಯ, ಕುಕ್ಕೆತ್ತಿ–ಬಳ್ಳು ಮೊದಲಾದ ದೈವಗಳ ಹೆಸರುಗಳು ಕೂಡ ವಿದ್ವಾಂಸರು ತಯಾರಿಸಿರುವ ಭೂತಗಳ ಪಟ್ಟಿಯಲ್ಲಿ ಸೇರಿಲ್ಲ. ಪದವಿ ಕಾಲೇಜಿನ ಪ್ರಾಧ್ಯಾಪಕ ಗೆಳಯ ನೀಡಿರುವ ಮಾಹಿತಿ ಸಿಕ್ಕಿರುವ ಈ ದೈವಗಳ ಕುರಿತು ಮುಂದೆ ಈ ಕೆಳಗಿನಂತೆ ತಿಳಿಸುತ್ತೇನೆ.






**1. ಕುಕ್ಕೆತ್ತಿ–ಬಳ್ಳು:** ಮದುಮಗಳು – ಮದುಮಗನ ವೇಷಭೂಷಣಗಳಲ್ಲಿ ಕಂಗೊಳಿಸುವ ಈ ದೈವಗಳು ಮನುಷ್ಯನ ಸಹಜರೂಪದಲ್ಲಿ ಇರುತ್ತಾರೆ. ತೆಂಗಿನ ತಿರಿಯ ಅಲಂಕಾರವಿರುವುದಿಲ್ಲ. ಮುಡಿ, ಅಣಿ, ಜಕ್ಕೆಲಣಿ ಇರುವುದಿಲ್ಲ. ಮದುಮಗನ ಅಲಂಕಾರದಲ್ಲಿರುವ ಬಳ್ಳು ದೈವಕ್ಕೆ ಕಾಲಿಗೆ ಅಡಿಕೆ ಹಾಳೆಯಿಂದ ತಯಾರಿಸಿದ ಕಾರ್ಪಾಳೆ ಮತ್ತು ಗಗ್ಗರ ಇರುತ್ತದೆ. ಮದುಮಗಳ ಅಲಂಕಾರದಲ್ಲಿರುವ ಕುಕ್ಕೆತ್ತಿ ದೈವಕ್ಕೆ

ಕಾರ್ವಾಳೆ ಮತ್ತು ಗೆಜ್ಜೆ ಇರುತ್ತದೆ. ಕುಕ್ಕೆತ್ತಿ ದೈವದ ಆಯುಧ ಕುಂಞತ್ತಿ, ಕುಕ್ಕೆತ್ತಿ–ಬಳ್ಳು ಗೌಡರ ಬಂಗಾರು ಬಳಿ ವಂಶದವರ ಕುಲದೈವಗಳಾಗಿವೆ.

ಕುಕ್ಕೆತ್ತಿ–ಬಳ್ಳು ದೈವಗಳ ಆರಾಧನೆ ಸಂದರ್ಭದಲ್ಲಿ ಪಾಡ್ದನವನ್ನು ಹೇಳುತ್ತಾರೆ. ಆ ಪಾಡ್ದನದ ಪ್ರಕಾರ ಕುಕ್ಕೆತ್ತಿ–ಬಳ್ಳು ಅಣ್ಣ ತಂಗಿಯರು ಬಡೆಕ್ಕಾಯಿ ರಾಜ್ಯದಲ್ಲಿ ಬಲ್ಲಾಳ ಆಳಿಕೊಂಡಿರುವಾಗ, ಬಾಳು–ಬಾಳಕ್ಕ ಎಂಬ ಮಕ್ಕಳು ಹುಟ್ಟಿ ಬೆಳೆಯುತ್ತಾರೆ. ಈ ಅಣ್ಣ ತಂಗಿಯರು ಯೌವನಾವಸ್ಥೆಯನ್ನು ಮುಟ್ಟುವಾಗ ಘಟ್ಟದ ಮೇಲಿಂದ ಶಿರಾಡಿ ಗುಂಡ್ಯಕ್ಕೆ ದಂಡು ಬರುತ್ತದೆ. ಆ ದಂಡಿನಲ್ಲಿ ಬಾಳು–ಬಾಳಕ್ಕನ ತಂದೆ ತಾಯಿಯರು ಹಾಗೂ ಬಂಗಾರು ಬಳಿಯವರು ಎಲ್ಲರೂ ಮರಣವನ್ನಪ್ಪುತ್ತಾರೆ. ಬಂಗಾರು ಬಳಿಯ ಕೊನೆಯ ಕುಡಿಗಳಾಗಿ ಬಾಳು–ಬಾಳಕ್ಕ ಮಾತ್ರ ಉಳಿಯುತ್ತಾರೆ. ಅನಾಥರಾದ ಈ ಅಣ್ಣ–ತಂಗಿಯರು ಕೆಲಸ ಹುಡುಕಿಕೊಂಡು ಹೋಗಿ ಬಲ್ಲಾಳರ ಹಸುಗಳನ್ನು ಸಾಕುವ ಕೆಲಸ ಮಾಡಿಕೊಂಡಿರುತ್ತಾರೆ. ಒಂದು ದಿನ ದನ ಮೇಯಿಸಲು ಹೋದಾಗ ತಂಗಿ ಬಾಳಕ್ಕನ ಕಾಲಿಗೆ ಮುಳ್ಳು ಚುಚ್ಚುತ್ತದೆ. ಆಗ ಅವಳು ಅಣ್ಣನಲ್ಲಿ ಮುಳ್ಳನ್ನು ತೆಗೆಯಲು ಹೇಳುತ್ತಾಳೆ. ಅಣ್ಣ ಮುಳ್ಳು ತೆಗೆಯುವ ಸಂದರ್ಭದಲ್ಲಿ ಅವರಲ್ಲಿ ಅಕ್ರಮ ಪ್ರಣಯ ಉಂಟಾಗುತ್ತದೆ. ಕೊನೆಗೆ ಅವರು ವಿವಾಹವಾಗಿ ರುದ್ರ ಚಾಮುಂಡಿಯ ಧರ್ಮಚಾವಡಿಗೆ ಬರುತ್ತಾರೆ. ಆಗ ನೀತಿ ತಪ್ಪಿದ ಇವರನ್ನು ನೋಡಿ ಕೋಪಗೊಂಡ ಧರ್ಮದೈವ ಇವರನ್ನು ಮಾಯ ಮಾಡುತ್ತದೆ. ಅನಂತರ ಬಂಗಾರು ಬಳಿಯವ ವಂಶ ನಿರ್ವಂಶ ಆಗಬಾರದೆಂದು ಪುನಃ ಬಾಳು–ಬಾಳಕ್ಕರನ್ನು ಪುನರುಜ್ಜೀವನಗೊಳಿಸುತ್ತದೆ ದೈವ. ಮುಂದೆ ಬಾಳಕ್ಕ ಮತ್ತು ಬಾಳು ಕುಕ್ಕೆತ್ತಿ – ಬಳ್ಳುಗಳೆಂಬ ಹೆಸರನ್ನು ಪಡೆದು ಬಂಗಾರು ಬಳಿಯವರ ಧರ್ಮ ದೈವಗಳಾಗಿ ಆರಾಧನೆಯನ್ನು ಪಡೆಯುತ್ತಾರೆ.

**2. ಮಾಲಿಂಗರಾಯ:** ಪಂಜ ಸೀಮೆಯ ಎಡಮಂಗಲ ಗ್ರಾಮದ ಅಧಿದೈವ ಮಾಲಿಂಗರಾಯ. ಎಣ್ಮೂರಿನಲ್ಲಿಯೂ ಈತನಿಗೆ ಆರಾಧನೆ ಇದೆ. ಮಾಲೆಂಗ್ರಿಯ ಪಿಲಿಕುಂಜ ಮಾಳ್ಯ ಈತನ ಮೂಲ ಆರಾಧನ ಸ್ಥಾನವಾಗಿದೆ. ಮಾಲಿಂಗರಾಯ ದೈವವು ಎಡಮಂಗಲದ ಮಾಲೆಂಗ್ರಿಗೆ ಸಂಬಂಧಿಸಿದ್ದಾಗಿದ್ದು, ಮಾಲೆಂಗ್ರಿಯರಾಯ ಮಾಲಿಂಗರಾಯ ಎಂದೆನಿಸಿಕೊಂಡಿರುವ ಸಾಧ್ಯತೆ ಇದೆ. ಚಂದ್ರಶೇಖರ ಮಂಡೆಕೋಲು ಇವರು ಸಂಗ್ರಹಿಸಿದ ಪಾಡ್ದನದ ಪ್ರಕಾರ ಈ ದೈವ ವೊರ್ದ್ರ ಗಟ್ಟದಲ್ಲಿ ಹುಟ್ಟಿಕೊಂಡಿದೆ. ಮರ್ದೂರಿನ ಬಲ್ಲಾಳರು ಗಟ್ಟಕ್ಕೆ ದಂಡಿಗೆಯನ್ನು ಕೊಂಡು ಹೋಗಿ ತೊಟ್ಟಿಲ ಮಗುವನ್ನು ಕರೆತರುವಾಗ ದಂಡಿಗೆಯ ಕೋಡಿನಲ್ಲಿ ಕುಳಿತುಕೊಂಡು ಈ ದೈವ ಬಂದು ಎಡಮಂಗಲ ಪಂಚಲಿಂಗೇಶ್ವರ ದೇವರ ಸನ್ನಿಧಿಗೆ ಬಂದು ಬಂಟ ಮಾಲಿಂಗರಾಯನೆಂದು ಕರೆಸಿಕೊಳ್ಳುತ್ತದೆ.

ಮಾಲಿಂಗರಾಯ ದೈವ ವಿಷ್ಣುಮೂರ್ತಿ ದೈವದಂತೆ ಬೆಂಕಿಗೆ ಬೀಳುವ ಆಚರಣೆ ಇರುತ್ತದೆ. ದಂಡನ್ನು ತೆಗೆದುಕೊಂಡು ಹೋದ ಬಲ್ಲಾಳನೇ ಮುಂದೆ ದೈವತ್ವಕ್ಕೇರಿ ಮಾಲಿಂಗರಾಯನೆಂದು ಆರಾಧಿಸಲ್ಪಟ್ಟಿರುವ ಸಾಧ್ಯತೆ ಇದೆ. ಈತನಿಗೆ ತೆಂಗಿನ ತಿರಿಯಿಂದ ಮಾಡಲ್ಪಟ್ಟ ಅಣಿ, ಮುಡಿಗಳ ಅಲಂಕಾರವಿದೆ. ಎರಡು ಕೊಂಬು ಹಾಗೂ ಮೀಸೆ ಇರುವ ಒಂದು ವಿಶಿಷ್ಟ ಮುಖವಾಡ ಇದೆ. ಈ ಪಾಡ್ದನವು ಮಂಜನ ನಾಯಕ ಮತ್ತು ದಂಡಪ್ಪ ನಾಯಕರೆಂಬ ಐತಿಹಾಸಿಕ ವ್ಯಕ್ತಿಗಳನ್ನು ಉಲ್ಲೇಖಿಸುತ್ತದೆ.

**3. ದಾಲ್ಲೂರಾಯ:** ಈ ದೈವ ದಾಲ್ಲೂರಾಯ, ಜಾಲ್ಲೂರಾಯ ಎಂಬ ಹೆಸರಿನಲ್ಲಿ ಜಾಲ್ಲೂರು, ಪನ್ನೆ ಬೀಡು, ಬೆಳ್ಳಾರೆ, ಕುಂಡುಳಿ, ನೇರೆಂಕಿಗಳಲ್ಲಿ ಆರಾಧಿಸಲ್ಪಡುತ್ತದೆ. ದಾಲ್ಲೂರಾಯಿ ಎಂದು ಕೂಡ ಹೇಳುತ್ತಾರೆ. ಗದ್ದೆಯ ಕೋರಿಯಂದು ಹಾಗೂ ಕಾವೇರಿ ಸಂಕ್ರಮಣದಂದು ಈತನಿಗೆ ಆರಾಧನೆ ಇರುತ್ತದೆ. ಹೊಸ ಅಕ್ಕಿ ಊಟ (ಪುದ್ವಾರ್)ದಂದು ಈತನಿಗೆ ವಿಶೇಷ ಆರಾಧನೆ ಇರುತ್ತದೆ ಸಿಕ್ಕಿರುವ ಪಾಡ್ದನದ ಪ್ರಕಾರ ನೇರೆಂಕಿ ಬಂಡಾಡಿಯ ಅರಸರು ತಂದೆ–ತಾಯಿಯರಿಗೆ ಪಿಂಡ ಪ್ರದಾನ ಮಾಡಲು ತಲಕಾವೇರಿಗೆ ಹೋಗುತ್ತಾರೆ. ದಾರಿಯಲ್ಲಿ ಕೇಮರ ಬಲ್ಲಳ ಸಿಕ್ಕಿ 'ಕಾವೇರಿ ತೀರ್ಥಕ್ಕೆ ಹೋಗುವವರು ಇಲ್ಲೆ ಹೋದಿರಿ. ಬರುವಾಗ ಯಾವ ದಾರಿಯಲ್ಲಿ ಬರುವುದೆಂದು' ಪ್ರಶ್ನಿಸುತ್ತಾನೆ. ಆಗ ಬಲ್ಲಾಳರು ಹೋಗುವಾಗಲೂ ಇದೆ ದಾರಿ ಬರುವಾಗಲೂ ಇದೆ ದಾರಿ ಎಂದುತ್ತರಿಸಿ ಮುಂದುವರಿಯುತ್ತಾರೆ. ತಲಕಾವೇರಿಯ ಬಲ್ಲಾಳರ ಎಳೆಯ ಹೆಣ್ಣು ಮಗಳನ್ನು ಮದುವೆ ಮಾಡಿಕೊಡುವಂತೆ ನೇರೆಂಕಿ–ಬಂಡಾಡಿಯ ಬಲ್ಲಾಳ ಅರಸರು ಕೇಳುತ್ತಾರೆ. ಬಲ್ಲಾಳರ ಒತ್ತಾಯಕ್ಕೆ ಕಟ್ಟು ಬಿದ್ದು ಮಗಳನ್ನು ಮದುವೆ ಮಾಡಿಕೊಡುತ್ತಾನೆ. ತಲಕಾವೇರಿಯ ಬಲ್ಲಾಳ ಅರಸು ದಂಡಿಗೆಯನ್ನು ಶೃಂಗರಿಸಿ ಬರುವಾಗ, ತಲಕಾವೇರಿ ಬಲ್ಲಾಳನಿಂದ ಆರಾಧಿಸಲ್ಪಡುವ ಈ ದೈವ ದಂಡಿಗೆಯ ಕೋಡಿನಲ್ಲಿ ಕುಳಿತು ಬರುತ್ತಾನೆ. ಮುಂದೆ ಈ ದೈವ ಕಳಸ ಕಂಡಲ್ಲಿ ಉದ್ಭವವಾಗಿ ದಾಲ್ಲೂರಿನಲ್ಲಿ ನೆಲೆಯೂರುತ್ತಾನೆ. ಬೆಳ್ಳಾರೆಯ ಪನ್ನೆ ಬೀಡಿನ ಗುಡ್ಡಕ್ಕೆ ಬಂದು ಬೊಳ್ಳೆ ಶಾಸ್ತ್ರದ ಹುಂಜವಾಗಿ ಕಾಣಿಸಿಕೊಂಡು ಆರಾಧನೆ ಪಡೆಯುತ್ತದೆ. ಜಲ ಅಂದರೆ ನೀರಿನಲ್ಲಿ ಉದ್ಭವವಾದ ಕಾರಣ ಈತನನ್ನೆ ಜಾಲ್ಲೂರಾಯ ಎಂದು ಕರೆಯುತ್ತಾರೆ ಎಂದು ಪನ್ನೆ ಬೀಡಿನ ಹಿರಿಯರು ಹೇಳುತ್ತಾರೆ.

ಪಾಡ್ದನದಲ್ಲಿ ಬರುವ ಕೇಮರ ಬಲ್ಲಾಳ ಹಾಗೂ ಆತನ ಪ್ರಶ್ನೆಯು ಸಂಘರ್ಷವನ್ನು ಸೂಚಿಸುತ್ತದೆ. ನೇರೆಂಕಿ – ಬಂಡಾಡಿಯ ಬಲ್ಲಾಳನೊಂದಿಗೆ ಬಂದ ದಾಲ್ಲೂರಾಯ ಮನುಷ್ಯಮೂಲ ಲಕ್ಷಣವನ್ನು ಹೊಂದಿದೆ. ಸಂಘರ್ಷದಿಂದ ಮರಣವಪ್ಪಿರಬಹುದಾದ ಜನಾನುರಾಗಿ ಬಲ್ಲಾಳನೇ ದಾಲ್ಲೂರಾಯನೆಂಬ ಹೆಸರಿನಲ್ಲಿ ಆರಾಧನೆ ಪಡೆಯುವ ಸಾಧ್ಯತೆ ಇದೆ.

**4. ದುಗ್ಗಲಾಯ:** ಈ ದೈವವು ದುಗ್ಗಲಾಯ, ದುಗ್ಗಲಾಯಿ ಎಂದು ಕರೆಯಲ್ಪಡುತ್ತದೆ. ಈ ದೈವವು ದುರ್ಗಾ ಸ್ವರೂಪಿ ಎಂದು ಭಾವಿಸುತ್ತಾರೆ. ಈ ದೈವವು ಪೆರಣೆ, ಪಾಲ್ತಾಡಿ, ಸವಣೂರು ಹಿರೇಬಂಡಾಡಿ ಮೊದಲಾದೆಡೆಗಳಲ್ಲಿ ಆರಾಧಿಸಲ್ಪಡುತ್ತದೆ. ತೆಂಗಿನ ತಿರಿಯಿಂದ ತಯಾರಿಸಿದ ಅಣಿ, ಜಕ್ಕೆಲಣಿಗಳ ಅಲಂಕಾರವಿರುತ್ತದೆ.

ಪಾಡ್ದನ ಪ್ರಕಾರ ಹಿರೇಬಂಡಾಡಿಯ ಬಾರಿ ಬಲ್ಲಾಳ ಅರಸನಿಗೆ ಉಪ್ಪಿನಂಗಡಿ ಅರಮನೆಯ ಬುಳೇರ ಗುತ್ತಿನಿಂದ ಮದುವೆಯಾಗುತ್ತದೆ. ಕೆಲವು ತಿಂಗಳುಗಳಲ್ಲೇ ದಂಪತಿಗಳ ನಡುವೆ ಜಗಳವಾಗಿ ಹೆಂಡತಿ ತವರಿಗೆ ಹೋಗಿ ಅಲ್ಲಿಂದ ಗಂಡನ ವಿರುದ್ಧ ಯುದ್ದಕ್ಕಾಗಿ ಬರುತ್ತಾಳೆ. ಆಗ ನಿದ್ರೆ ಮಾಡುತ್ತಿದ್ದ ಬಲ್ಲಾಳನ ಕನಸಿನಲ್ಲಿ ದುಗ್ಗಲಾಯ ಭೂತ ಕಾಣಿಸಿಕೊಂಡು ಯುದ್ಧ ಮಾಡು ಇಲ್ಲವೇ ಮಂಜೊಟಿ ಕಾಡಿಗೆ ಓಡಿ ಹೋಗುವಂತೆ ತಿಳಿಸುತ್ತದೆ. ಬಾರಿ ಬಲ್ಲಾಳ ಕಾಡಿಗೆ ಓಡಿ ಹೋಗುತ್ತಾನೆ. ಬಲ್ಲಾಳನ ರೂಪದಲ್ಲಿ ಬಂದ ಭೂತ ಯುದ್ಧ ಮಾಡಿ ಹೆಂಡತಿಯನ್ನು ಕೊಲ್ಲುತ್ತದೆ. ಮುಂದೆ ಕನ್ನಡರಸನ ಜೊತೆ ಯುದ್ಧ ಮಾಡಿ ಆತನನ್ನು ಸೋಲಿಸುತ್ತದೆ. ನಂತರ ದುಗ್ಗಲಡ್ಕಕ್ಕೆ ಬಂದು ಪುಂಡೈದ ಮರದ ಬುಡದಲ್ಲಿ ನಿದ್ರೆ ಮಾಡುತ್ತಾನೆ. ಆಗ ಕ್ಯೊಕುಳಿ ಹದಿನಾರು ಮನೆಯವರು ಮತ್ತು ಬಂಗೇರರು ಕೋಟೆ ಕಟ್ಟಿ ನಿಂತಾಗ ಅವರಿಗೂ ಭೂತಕ್ಕೂ ಯುದ್ಧವಾಗಿ ಕೋಟೆಯನ್ನು ಭೂತ ನಾಶ ಮಾಡುತ್ತದೆ. ಮುಂದೆ ದುಗ್ಗಲಾಯ ಮನುಷ್ಯರೂಪವನ್ನು ಬಿಟ್ಟು ಸುತ್ತುಕೋಟೆ ಚಾಮುಂಡಿ ರೂಪ ತಾಳಿ ತಲಕಾವೇರಿಯ ಕಾವೇರಮ್ಮನ ಸನ್ನಿಧಿಯಲ್ಲಿ ನೆಲೆ ನಿಲ್ಲುತ್ತದೆ.

ಇಲ್ಲಿ ಕೂಡ ಕೋಟೆ ಕಟ್ಟುವ ಹಾಗೂ ಯುದ್ಧದ ಸಂದರ್ಭಗಳು ಸಂಘರ್ಷವನ್ನು ಸೂಚಿಸುತ್ತದೆ. ಹಿರೇ ಬಂಡಾಡಿಯ ಬಾರಿ ಬಲ್ಲಾಳ ಜನಾನುರಾಗಿಯಾಗಿದ್ದು ಯುದ್ಧದಲ್ಲಿ ದುರಂತಕ್ಕೀಡಾಗಿ ದೈವತ್ವಕ್ಕೇರಿ ದುಗ್ಗಲಾಯನೆಂದು ಆರಾಧಿಸಲ್ಪಡುವ ಸಾಧ್ಯತೆ ಇದೆ.

ಹಿರಿಯ ಜನಪದ ವಿದ್ವಾಂಸರಾದ ಡಿ.ಜಿ. ನಡ್ಕ ಇವರು "ಮಾಲಿಂಗರಾಯ, ದುಗ್ಗಲಾಯ, ದಾಲ್ಸೂರಾಯ ಈ ಮೂರು ವಿಜಯನಗರ ಅರಸರ ಕಾಲದಲ್ಲಿ ಪ್ರಚಲಿತವಿದ್ದ ರಾಯ ಪದ್ಧತಿಯಂತೆ ಆದಾಯ ಸಂಗ್ರಹಿಸುವ ರಾಯ' ಎಂಬ ಅಧಿಕಾರಿಗೆ ಸಂಬಂಧಿಸಿದ ದೈವಗಳು' ಎಂದು ಅಭಿಪ್ರಾಯ ಪಡುತ್ತಾರೆ. ಸಾಮಾನ್ಯವಾಗಿ ಬೀಡಿನ ಬಲ್ಲಾಳರೇ ರಾಯವನ್ನು ಸಂಗ್ರಹಿಸಿ ಕಳುಹಿಸುವ ವ್ಯಕ್ತಿಯಾಗಿದ್ದು ಬಲ್ಲಾಳನೇ ಮುಂದೆ ದೈವತ್ವಕ್ಕೇರಿ ದುಗ್ಗಲಾಯ, ಮಾಲಿಂಗರಾಯ, ದಾಲ್ಸೂರಾಯನೆಂದು ಆಯಾ ಪ್ರದೇಶಕ್ಕನುಗುಣವಾಗಿ ಬೇರೆ ಬೇರೆ ಹೆಸರಿನಿಂದ ಆರಾಧಿಸಲ್ಪಡುವ ಸಾಧ್ಯತೆ ಇದೆ.

**5. ಜಂಗ ಬಂಟ:** ಇದೊಂದು ಉಗ್ರ ಸ್ವರೂಪದ ದೈವವಾಗಿದ್ದು ಸುಳ್ಯ ಪರಿಸರದ ಕಾಯರ್ತೋಡಿ ಜಾಲಾಟದ ಸಂದರ್ಭದಲ್ಲಿ ಮಾತ್ರ ಈ ದೈವಕ್ಕೆ ಆರಾಧನೆ ಇರುತ್ತದೆ. ಈತನನ್ನು ಹನುಮಂತನೆಂದೂ ಭಾವಿಸುತ್ತಾರೆ. ಈ ದೈವಕ್ಕೆ ಸಂಬಂಧಿಸಿದ ಪಾಡ್ದನ ಲಭ್ಯವಿಲ್ಲ. ಬೆತ್ತದಲ್ಲಿ ಹೊಡೆದುಕೊಳ್ಳುವುದು ಈ ದೈವದ ವೈಶಿಷ್ಟತೆ. ಈತನ ಆಯುಧ ಕೂಡ ಬೆತ್ತವೇ ಆಗಿದೆ. ಜಂಗ ಬಂಟನ ವೇಷಭೂಷಣಗಳು ಸರಳವಾಗಿದ್ದು ಕಾಲಿಗೆ ಗಗ್ಗರ, ತಲೆಗೆ ತಲೆಪಟ್ಟವನ್ನು ಧರಿಸಿರುತ್ತದೆ. ಚಚ್ಚ ನಾಯಕನ ಸಹೋದರ ಬೈಸು ನಾಯಕನ ಪಾಡ್ದನದ ಕೊನೆಯಲ್ಲಿ ಆತ ಜಂಗ ಬಂಟನಾಗಿ ಹುಟ್ಟುತ್ತಾನೆ ಎಂದು ಹೇಳಲಾಗಿದೆ. ಕಾಯರ್ತೋಡಿಯ ಜಂಗ ಬಂಟನ ಮೊದಲು ಬೈಸು ನಾಯಕನ ದೈವಕ್ಕೆ ನೇಮ ಇರುತ್ತದೆ.

**6. ಅಜ್ಜಿ ಭೂತ:** ಸುಳ್ಯ ಪರಿಸರದ ಗುತ್ತಿಗಾರು ಮೊಗ್ರಾಲ್, ಮಡಪ್ಪಾಡಿ, ವಾಲ್ತಾಜೆ, ಕಂದ್ರಪ್ಪಾಡಿ ಮೊದಲಾದೆಡೆಗಳಲ್ಲಿ ಅಜ್ಜಿ ಭೂತಕ್ಕೆ ಆರಾಧನೆ ಇದೆ. ಮೂರು ರೀತಿಯಲ್ಲಿ ಅಜ್ಜಿ ಭೂತ ಇದೆ.

1. **ಮಲೆ ಅಜ್ಜಿ:** ಮಲೆ ಅಜ್ಜಿಯ ವೇಷ ಭೂಷಣಗಳು ಮಲೆ ಕುಡಿಯರ ಹೆಂಗಸರ ಅಲಂಕಾರವನ್ನು ಹೋಲುತ್ತದೆ. ಮಲೆ ಅಜ್ಜಿ ತುಳು ಭಾಷೆಯಲ್ಲಿ ನುಡಿ ಕೊಡುತ್ತದೆ.
2. **ಭೈರಜ್ಜಿ:** ಭೈರಜ್ಜಿಯ ವೇಷ ಭೂಷಣಗಳು ಭೈರ ಜನಾಂಗದ ಹೆಂಗಸರ ಅಲಂಕಾರವನ್ನು ಹೋಲುತ್ತದೆ. ಭೈರರ ಮಾತೃ ಭಾಷೆ ಕನ್ನಡ. ಅಂತೆಯೇ ಭೈರಜ್ಜಿ ಕೂಡ ಕನ್ನಡ ಭಾಷೆಯಲ್ಲಿ ನುಡಿ ಕೊಡುತ್ತದೆ.
3. **ಕೊರಗಜ್ಜಿ:** ಕೊರಗು ಜನಾಂಗದವರ ವೇಷ ಭೂಷಣ, ನಡೆ ನುಡಿಯನ್ನು ಹೊಂದಿರುತ್ತದೆ.

ಅಜ್ಜಿ ಭೂತದ ಪಾಡ್ದನದಲ್ಲಿ ಈ ದೈವದ ಹುಟ್ಟಿನ ಕುರಿತು ಮಾಹಿತಿ ಲಭ್ಯವಿಲ್ಲ. ಈ ದೈವ ಉಳ್ಳಾಕುಲುಗಳೊಂದಿಗೆ ಘಟ್ಟದಿಂದ ಇಳಿದು ಬಂತು. ಈ ದೈವಕ್ಕೆ ನೂರೊಂದು ಮಕ್ಕಳೆಂದು ಹೇಳಲಾಗಿದೆ. ಮಕ್ಕಳನ್ನು ಕರೆದುಕೊಂಡು ಏಡಿ ಹಿಡಿಯಲು ಬರುತ್ತಾಳೆ ಎಂದು ಪಾಡ್ದನ ವರ್ಣಿಸುತ್ತದೆ. ಕಾಯರ್ತೋಡಿಯಲ್ಲಿ 'ಸಬ್ಬಡ್ತೆರ್' ಎಂಬ ಸ್ತ್ರೀ ದೈವಕ್ಕೆ ಆರಾಧನೆ ಇದೆ. ಈ ದೈವದ ಪಾಡ್ದನದ ಪ್ರಕಾರ 'ಸುಬ್ಬಕ್ಕ' ಎಂಬ ಗೌಡ ಜನಾಂಗದ ಹೆಣ್ಣು ಮಗಳು ದೇಂಗೋಡಿಗೆ ವಿವಾಹವಾಗಿ ಬರುತ್ತಾಳೆ. ಒಂದು ದಿನ ನಾದಿನಿಯರೊಂದಿಗೆ ಸೊಪ್ಪು ಕಡಿದು ತರಲು ಕಾಡಿಗೆ ಹೋಗುತ್ತಾರೆ. ಅಲ್ಲಿ ಸುಬ್ಬಕ್ಕನನ್ನು ಉಳ್ಳಾಕುಲು ಮಾಯ ಮಾಡಿ ತಮ್ಮ ಜೊತೆಗೆ ಕರೆದೊಯ್ಯುತ್ತಾರೆ. ಸಬ್ಬಡ್ತೆರ್ ದೈವದ ಪಾಡ್ದನದಲ್ಲಿ ಸಬ್ಬಡ್ತೆರ್ ಅನ್ನು ಅಜ್ಜಿ ಭೂತ ಎಂದು ಕೂಡ ಹೇಳಲಾಗಿದೆ. ಅಜ್ಜಿ ಭೂತಕ್ಕೆ ಸಂಬಂಧಿಸಿದ ಐತಿಹ್ಯದ ಪ್ರಕಾರ ಉಳ್ಳಾಕುಲುಗಳಿಗೆ ಶೂಲಿನಿ ದೇವಾಲಯದ ಬಳಿ ಬೆಳಕು ಕಾಣಿಸಿಕೊಂಡು, ಅವರು ಅಲ್ಲಿಗೆ ಹೋದಾಗ ಅಲ್ಲಿ ಒಂದು ಸ್ತ್ರೀ ರೂಪಿ ಶಕ್ತಿ ಇರುತ್ತದೆ. ಆ ಸ್ತ್ರೀಯ ಜೊತೆಗೆ ಉಳ್ಳಾಕುಲು ಕುದುರೆ ಏರಿ ಬಂದು ಹುಲಿಪಾಂಜಾರ ಎಂಬಲ್ಲಿ ಒಳ ನುಗ್ಗಿದರು. ಆ ಸ್ತ್ರೀಯೇ 'ಅಜ್ಜಿ ಭೂತ' ಎಂದು ಹೇಳಲಾಗಿದೆ. ಸುಬ್ಬಡ್ತೆರ್ ಮತ್ತು ಅಜ್ಜಿ ಭೂತ ಎರಡೂ ಸ್ತ್ರೀ ಮೂಲವನ್ನು ಹೊಂದಿದ್ದು, ಉಳ್ಳಾಕುಲು ಸೇರಿಗೆಗೆ ಸಂದ ದೈವಗಳಾಗಿವೆ. ಈ ಎರಡು ದೈವಗಳು ಒಂದೇ ದೈವದ ರೂಪಾಂತರಗಳಾಗಿರುವ ಸಾಧ್ಯತೆ ಇದೆ.

**7. ಕೂಜಿಲು:** ಕೂಜಿಲು ಎಂಬುದಕ್ಕೆ ಉಪದೈವಗಳು ಎಂಬರ್ಥವಿದೆ. ಗುತ್ತಿಗಾರು, ಮೊಗ್ರಾಲ್, ಮಡಪ್ಪಾಡಿ, ಕಾಯರ್ತೋಡಿ ಮೊದಲಾದ ಸುಳ್ಯ ಪರಿಸರದಲ್ಲಿ ಕೂಜಿಲು ದೈಗಳಿಗೆ ಆರಾಧನೆ ಇರುತ್ತದೆ. ಸಾಮಾನ್ಯವಾಗಿ ಅಜ್ಜಿ ಭೂತದೊಂದಿಗೆ ಕೂಜಿಲುಗಳಿಗೆ ಆರಾಧನೆ ಇರುತ್ತದೆ. ಕೂಜಿಲುಗಳನ್ನು ಅಜ್ಜಿ ಭೂತದ ಮಕ್ಕಳೆಂದು ಭಾವಿಸಲಾಗಿದೆ. ಕೂಜಿಲುಗಳು ಕೂಡ ಅಜ್ಜಿ ಭೂತದಂತೆ ಉಳ್ಳಾಕುಲುಗಳೊಂದಿಗೆ ಘಟ್ಟದಿಂದ ಕೆಳಗೆ ಇಳಿದು ಬಂದ ಮಲೆ ದೈವಗಳಾಗಿವೆ. ಅಡಿಕೆಯ ಸೋಗೆಯನ್ನು ಬಗ್ಗಿಸಿ ಇವರಿಗೆ ವಿಶಿಷ್ಟವಾದ ಅಲಂಕಾರವನ್ನು ಮಾಡುತ್ತಾರೆ. ಇತರ ದೈವಗಳಿಗೆ ತೆಂಗಿನ ತಿರಿಯ ಅಲಂಕಾರವಿದ್ದರೆ ಈ ದೈವಗಳಿಗೆ ಅಡಿಕೆ ಸೋಗೆಯ ಅಲಂಕಾರವಿರುತ್ತದೆ. ಕೈಯಲ್ಲಿ ನೆಕ್ಕಿ ಗಿಡದ ಸೊಪ್ಪನ್ನು ಹಿಡಿಯುತ್ತಾರೆ. ಇವರು ಊರಿನವರ ತೋಟಕ್ಕೆ ಹೋಗಿ ಅಡಿಕೆ ಗೊನೆ, ತೆಂಗಿನ ಗೊನೆ, ಬಾಳೆ ಗೊನೆ ಮೊದಲಾದವುಗಳನ್ನು ಕಿತ್ತು ತರುತ್ತಾರೆ.

ಇದು ಸೂರೆಯನ್ನು ಸೂಚಿಸುತ್ತದೆ. ಪಂಜದ ಬಲ್ಲಾಳ ಕುಂಞಣಾಳ್ವ ತನ್ನ ಸೀಮೆಯಲ್ಲಿ ಸುತ್ತಲೂ ತಡಂಗಗಳನ್ನು ನಿರ್ಮಿಸಿದ್ದು, ಈ ತಡಂಗಗಳಿಗೆ ಬಿದ್ದು ಅನೇಕ ಕೂಜಿಲುಗಳು ಮಾಯವಾದ ಕುರಿತು ಇಲ್ಲಿನ ಐತಿಹ್ಯವು ತಿಳಿಸುತ್ತದೆ. ಉಳ್ಳಾಕುಲು ಮೂಲತಃ ಅರಸರಾಗಿದ್ದು ಕೂಜಿಲು, ಅಜ್ಜಿ ಭೂತಗಳು ಆ ಅರಸರ ಪರಿವಾರದವರಾಗಿರಬಹುದು.

**8. ಮರ್ಲು ಮಾಣಿ:** ಸುಳ್ಯದ ಎಡಮಂಗಲದಲ್ಲಿ ಉಳ್ಳಾಕುಲುಗ–'ಳೊಂದಿಗೆ ಆರಾಧಿಸಲ್ಪಡುವ ದೈವವಿದು. ಹೆಸರೇ ಸೂಚಿಸುವಂತೆ ಈ ದೈವ ಮೂಲತಃ ಬ್ರಾಹ್ಮಣ ಮಾಣಿಯಾಗಿದೆ. ಉಳ್ಳಾಕುಲು ಮರ್ಲಾಣೆ ಎಂಬ ಪ್ರದೇಶಕ್ಕೆ ಬರುವಾಗ ಅಲ್ಲಿ ಬ್ರಾಹ್ಮಣ ಅರ್ಚಕನೋರ್ವ ಪಂಚಕುರುವೆ ಹಿಡಿದುಕೊಂಡು ದೇವರಿಗೆ ಹೂ ಕೊಯ್ಯುತ್ತಿರುತ್ತಾನೆ. ಆಗ ಅಲ್ಲಿಗೆ ಬಂದ ಉಳ್ಳಾಕುಲು ಎಡಮಂಗಲ ದೇವಸ್ಥಾನಕ್ಕೆ ಹೋಗುವ ದಾರಿಯನ್ನು ಕೇಳಿದಾಗ, ಈ ಬ್ರಾಹ್ಮಣ ಹುಡುಗ ತಪ್ಪು ದಾರಿಯನ್ನು ಹೇಳುತ್ತಾನೆ. ಇದು ತಿಳಿದ ಉಳ್ಳಾಕುಲುಗಳು ಕೋಪಿಸಿಕೊಂಡು ಅವನನ್ನು ಮಾಯ ಮಾಡುತ್ತಾರೆ. ಆಗ ತಪ್ಪಿಗೆ ಕ್ಷಮೆ ಯಾಚಿಸುತ್ತಾನೆ ಆ ಅರ್ಚಕ. ಆಗ ಉಳ್ಳಾಕುಲು ಅವನನ್ನು ತನ್ನ ಸೇರಿಗೆಯ ದೈವವಾಗಿ ಸೇರಿಸಿಕೊಳ್ಳುತ್ತಾರೆ. ಆತ ಮರ್ಲಾಣೆಯ ಮಾಣಿ ಎಂಬ ಹೆಸರಿನಿಂದ ಆರಾಧಿಸಲ್ಪಡುತ್ತಾನೆ. ಕಾಲಾಂತರದಲ್ಲಿ ಮರ್ಲಾಣೆಯ ಮಾಣಿ ಎಂಬುದು ಮರ್ಲು ಮಾಣಿ ಎಂದು ಅಪಭ್ರಂಶಗೊಂಡಿದೆ. ಈತನ ಬೆನ್ನಿಗೆ ಪಂಚಕುರುವೆ ನೇತು ಹಾಕುತ್ತಾರೆ. ಕೈಯಲ್ಲಿ ತಾಳೆಗರಿಯ ಕೊಡೆ ಹಾಗೂ ಕಬ್ಬಿನ ಜಲ್ಲೆಯನ್ನು ಈ ದೈವ ಹಿಡಿದಿರುತ್ತದೆ.

**9. ಭವನೊ:** ರಕ್ತೇಶ್ವರಿ ದೈವದೊಂದಿಗೆ ಆರಾಧಿಸಲ್ಪಡುವ ದೈವವಿದು. ಲಭ್ಯವಿರುವ ಮಾಹಿತಿ ಪ್ರಕಾರ ಭವನೊ ಮೂಲತಃ ಬ್ರಾಹ್ಮಣ ತಂತ್ರಿ. ಒಂದು ದಿನ ರಕ್ತೇಶ್ವರಿ ದೈವ ಬ್ರಾಹ್ಮಣ ತಂತ್ರಿಗಳಲ್ಲಿ ಅಸುರ

ಕ್ರಿಯೆಯಾದ ಮಾಂಸ ಮದ್ಯಗಳನ್ನು ಕೇಳುತ್ತದೆ. ಆಗ ಬ್ರಾಹ್ಮಣ ತಂತ್ರಿ ಕೊಡುವುದಿಲ್ಲ. ಕೊನೆಗೆ ರಕ್ತೇಶ್ವರಿ ದೈವದ ಆಗ್ರಹಕ್ಕೆ ಮಣಿದು ಅಸುರ ಕ್ರಿಯೆ ನೀಡುತ್ತಾನೆ. ಅನಂತರ ಮಾಯವಾಗಿ ಭವನೊ ಎಂಬ ಹೆಸರಿನಲ್ಲಿ ರಕ್ತೇಶ್ವರಿ ಸನ್ನಿಧಿಗೆ ಸೇರಿ ಆರಾಧಿಸಲ್ಪಡುತ್ತಾನೆ. ಭವನೊ ದೈವ ರಕ್ತೇಶ್ವರಿ ದೈವಕ್ಕೆ ಆಹಾರ ಸ್ವೀಕರಿಸಲು ಬಿಡದೆ ತೊಂದರೆ ಕೊಡುತ್ತದೆ. ಆಗ ರಕ್ತೇಶ್ವರಿ ದೈವ ಆತನನ್ನು ಮರಕ್ಕೆ ಕಟ್ಟಿ ಹಾಕುತ್ತದೆ. ಆದರೂ ಆತ ಬಿಡಿಸಿಕೊಂಡು ಬಂದು ರಕ್ತೇಶ್ವರಿಗೆ ತೊಂದರೆ ಕೊಡುತ್ತಾನೆ. ಭವನೊ ಎಂಬ ಹೆಸರಿನ ಮೂಲವನ್ನು ಭಂಗ ಬರ್ಪಾವುನಾಯೆ ಭವನೊ ಎಂದು ಕೂಡಾ ಹೇಳಬಹುದು.

**10. ಪರವಭೂತ:** ಚಿತ್ತೇರಿ ಬಲ್ಲಾಳನ ಕೋಲು ಮೇಸ್ತ್ರಿಯವನಾಗಿದ್ದ ಪರವನೊಬ್ಬ ದೈವತ್ವಕ್ಕೇರಿ ಆರಾಧಿಸಲ್ಪಡುವ ದೈವ ಪರವ ಭೂತ. ಗುತ್ತಿಗಾರಿನ ಮೊಗ್ರಾಲ್ ಚಾವಡಿಯ ಸಮೀಪದಲ್ಲಿರುವ ಚಿಕ್ಮುಳಿ ಬಲ್ಲಾಳನ ಸಮಾಧಿಯ ಬಳಿ ಈ ದೈವಕ್ಕೆ ಕೋಲ ಕೊಡುತ್ತಾರೆ. ಸಮಾಧಿಯ ಮೇಲೆ ಹತ್ತಿ ಕುಣಿದುಕೊಂಡು ತನ್ನ ಕಥೆಯನ್ನು ಹೇಳುತ್ತದೆ ಪರವ ಭೂತ. ಪರವನ ತಂದೆ ತಾಯಿ ಚಿಕ್ಕಂದಿನಲ್ಲಿಯೇ ಮರಣವನ್ನಪ್ಪಿರುತ್ತಾರೆ. ಆಗ ಎಳೆಯ ಮಗುವಿಗೆ ಚಿಕ್ಮುಳಿ ಬಲ್ಲಾಳ ಆಶ್ರಯ ಕೊಟ್ಟು ಸಾಕುತ್ತಾನೆ. ಚಿಕ್ಮುಳಿ ಬಲ್ಲಾಳನಿಗೆ ಸಂತತಿ ಇರುವುದಿಲ್ಲ. ಮುಂದೊಂದು ದಿನ ಯುದ್ಧದಲ್ಲಿ ಚಿಕ್ಮುಳಿ ಬಲ್ಲಾಳ ಸತ್ತಾಗ ಅವನ ಶವ ಸಂಸ್ಕಾರವನ್ನು ಮಾಡಲು ಯಾರೂ ಇರುವುದಿಲ್ಲ. ಆಗ ಪರವನು ಮಾವು, ಹಲಸಿನ ಮರ ಕಡಿದು ಕಾಷ್ಟ ಸಿದ್ಧಮಾಡಿ ಬಲ್ಲಾಳನ ಶವ ಸಂಸ್ಕಾರ ಮಾಡುತ್ತಾನೆ. ಅನಂತರ 'ತಂದೆತಾಯಿಯಂತೆ ಇದ್ದು ಸಾಕಿ ಸಲಹಿದ ಬಲ್ಲಾಳ ಇಲ್ಲದೆ ತಾನು ಹೇಗೆ ಬದುಕಲಿ? ನಾನೂ ಸಾಯುತ್ತೇನೆ' ಎಂದು ಹೇಳಿ ಕಾಷ್ಟಕ್ಕೆ ಹಾರಿ ಸಾಯುತ್ತಾನೆ. ಹೀಗೆ ಮರಣವನ್ನಪ್ಪಿದ ಪರವ, ಪರವಭೂತವಾಗಿ ದೈವತ್ವವನ್ನು ಪಡೆದು ಆರಾಧಿಸಲ್ಪಡುತ್ತಾನೆ.

**11. ಉರವ ಮತ್ತು ಎರುಬಂಟ:** ಪೂಕರೆ ಕಂಬಳ ನೇಮದ ಸಂದರ್ಭದಲ್ಲಿ ಉರವ ಮತ್ತು ಎರುಬಂಟ ದೈವಗಳಿಗೆ ನೇಮ ಇರುತ್ತದೆ, ಈಜೋಮಂಜೊಟ್ಟಿ ಗೋಣ ಪಾಡ್ದನದಲ್ಲಿ ಸತ್ಯದ ಗದ್ದೆಗೆ ಇಳಿದ ಮೂಲದ ಮಾಣಿ ಹಾಗೂ ಕೋಣಗಳು ಮಾಯವಾದ ಕಥೆ ಇದೆ. ಇದೇ ರೀತಿಯ ಐತಿಹ್ಯಗಳು ಕೋಳ್ಯೂರು, ಬೀರೂರು ಮೊದಲಾದ ಕಂಬಳ ಗದ್ದೆಗಳಲ್ಲಿ ಪ್ರಚಲಿತವಿವೆ. ಪೂಕರೆ ಕಂಬಳದಂದು ಯಜಮಾನನ ಕೋಣಗಳ ನೇಗಿಲಿನಿಂದ ಹಗ್ಗ ಬಿಡಿಸುವ ಕೆಲಸವನ್ನು ಉರವ ದೈವ ಮಾಡುತ್ತದೆ. ಇದು ಗದ್ದೆ ಉಳುವ ಮೂಲದ ಮಾಣಿಯ ಕಾರ್ಯವನ್ನು ನೆನಪಿಸುತ್ತಿದ್ದು, ಮಾಯವಾದ ಮೂಲದ ಮಾಣಿಯೇ ಉರವ ದೈವವಾಗಿರಬಹುದು ಎಂಬುದನ್ನು ಸೂಚಿಸುತ್ತದೆ. ಅಂತೆಯೇ 'ಒಂಜಾಳದವನು ಆದನೇ ಬಬ್ಬು' ಎಂಬಲ್ಲಿ ಮೂಲದ ಮಾಣಿ ದೈವತ್ವಕ್ಕೇರಿದ ಸೂಚನೆ ಇದೆ. ಆದ್ದರಿಂದ ಸತ್ಯದ ಕಂಬಳ ಗದ್ದೆಗೆ ಇಳಿದು ಮಾಯವಾದ ಮೂಲದ ಮಾಣಿಯೇ ಉರವ ದೈವವಾಗಿದ್ದಾನೆ ಎಂದು ಹೇಳಬಹುದು. ಮೂಲದ ಮಾಣಿಯೊಂದಿಗೆ ಮಾಯವಾದ 'ಕೋಣ' ಎರುಬಂಟ ಎಂಬ ದೈವವಾಗಿ ಆರಾಧನೆ ಪಡೆಯುತ್ತದೆ. ಎರುಬಂಟನಿಗೆ ತಲೆಗೆ ಎರು ಕೋಡು (ಕೊಂಬು) ಗಳನ್ನು ಕಟ್ಟುವ ಮೂಲಕ ಅದು ಮೂಲತ: ಕೋಣ ಎಂಬುದನ್ನು ಸೂಚಿಸುತ್ತಾರೆ.

**12. ಕನ್ನಡ ಬೀರ:** ಕಾಸರಗೋಡಿನ ಹೊಸಂಗಡಿ ಪರಿಸರದ ತಲೇಕಳ, ಬೆಜ್ಜ ಮದಂಗಲ್ಲು ಮೊದಲಾದೆಡೆಗಳಲ್ಲಿ ಧೂಮಾವತಿ ದೈವದೊಂದಿಗೆ ಈ ದೈವಕ್ಕೆ ಆರಾಧನೆ ಇದೆ. ಬಿಳಿ ಬಟ್ಟೆಯ ಕಚ್ಚೆಯನ್ನು ಧರಿಸುವ ಈತನಿಗೆ ತುಳುನಾಡಿನ ಇತರ ದೈವಗಳಂತೆ ತೆಂಗಿನ ತಿರಿಯ ಅಲಂಕಾರ, ಅರದಳ, ಮುಖವರ್ಣಿಕೆ, ಪುಳ್ಳೆಗಳು ಇರುವುದಿಲ್ಲ. ಮನುಷ್ಯರ ಸಹಜ ಅಲಂಕಾರವಿರುತ್ತದೆ. ಇಲ್ಲಿ ಲಭ್ಯವಿರುವ ಐತಿಹ್ಯದ ಪ್ರಕಾರ ಈತ ಕನ್ನಡ ಪ್ರದೇಶದ ಸುಬೇದಾರ. ಮೀಯಪದವು ಸಮೀಪದಲ್ಲಿ ಪೊಳ್ಳಕಜೆ ಎಂಬುದು ಮಂತ್ರವಾದಿಗಳ ಮನೆತನವಾಗಿದ್ದು, ಅಲ್ಲಿ ದುರ್ಗಾರಾಧನೆ ಮಾಡುತ್ತಾರೆ. ಈಗ ಅಲ್ಲಿನ ದೇವಸ್ಥಾನದ ಮುಖ್ಯಸ್ಥರಾದ ಗೋವಿಂದ ಭಟ್ಟರ ಅಜ್ಜನ ಕಾಲದಲ್ಲಿ ನಡೆದ ಘಟನೆ ಇದು. ಯಾವುದೋ ಕಾರಣಕ್ಕೆ ಇವರ ಮನೆಯನ್ನು ಜಪ್ತಿ ಮಾಡಲು ಬ್ರಿಟಿಷ್ ಅಧಿಕಾರಿಗಳು ಇಬ್ಬರು ಸುಬೇದಾರರನ್ನು ಕಳುಹಿಸುತ್ತಾರೆ. ದೇವಾಲಯದ ಭಟ್ಟರ ಹೆಂಡತಿ ಅವರಿಗೆ ಊಟ ಬಡಿಸಿ ಒಳಗೆ ಹೋಗಿ ಹೊರಬರುವಷ್ಟರಲ್ಲಿ ಇಬ್ಬರ ಸುಬೇದಾರರಲ್ಲಿ ಒಬ್ಬ ಮಾಯವಾಗಿರುತ್ತಾನೆ. ಮಾಯವಾದ ಕುರುಹಾಗಿ ಆತನ ತಲೆಕೂದಲು, ಉಗುರು ಉಳಿದಿರುತ್ತದೆ. ಇದನ್ನು ನೋಡಿದ ಇನ್ನೊಬ್ಬ ಸುಬೇದಾರ ಓಡಿ ಹೋಗುತ್ತಾನೆ. ಇಲ್ಲಿ ಮಾಯವಾದ ಸುಬೇದಾರ ಕನ್ನಡಿಗನಾಗಿದ್ದು, ಆತನು ಧೂಮಾವತಿ ದೈವದ ಸೇರಿಗೆಗೆ ಸಂದು ಹೋಗಿ, ದೈವತ್ವಕ್ಕೇರಿ 'ಕನ್ನಡ ಬೀರ' ಎಂಬ ಹೆಸರಿನಲ್ಲಿ ಆರಾಧಿಸಲ್ಪಡುತ್ತಾನೆ. ಈತನಿಗೊಂದು ಬನ ಕೂಡ ಬೆಣ್ಣೆಮನೆ ಗೋಪಾಲ ಭಟ್ಟರ ತೋಟದಲ್ಲಿದೆ.

**ಬೀರ್ನಾಳ್ವ:** ಕಾಸರಗೋಡು ಪರಿಸರದಲ್ಲಿ ಆರಾಧಿಸಲ್ಪಡುವ ಬೀರ್ನಾಳ್ವ ದೈವ ಸ್ತ್ರೀ ದೈವ. ಬೇಳದ ಬೀರಣ್ಣಾಳ್ವ ಎಂಬಾತ ಒಂದು ಕತ್ತಿಯನ್ನು ತಯಾರಿಸಲು ಅಡೂರಿನ ಕಮ್ಮಾರನಲ್ಲಿ ಹೇಳಿರುತ್ತಾನೆ. ಕತ್ತಿಯನ್ನು ತಯಾರಿಸಿದಾಗ ಅದು ವಿಶಿಷ್ಟ ಆಯುಧವಾಗುತ್ತದೆ. ಕಮ್ಮಾರನಿಗೆ ಅದರ ಮೇಲೆ ಭಕ್ತಿ ಬಂದು ಪೂಜಿಸುತ್ತಿರುತ್ತಾನೆ. ಒಂದು ದಿನ ಬೀರಣ್ಣಾಳ್ವ ಬಂದು ಆ ಆಯುಧವನ್ನು ಹಿಡಿಯುತ್ತಾನೆ. ಆಗ ಆ ಆಯುಧದಲ್ಲಿ ಇದ್ದ ವಿಶಿಷ್ಟ ಶಕ್ತಿ ಬೀರಣ್ಣಾಳ್ವನ ಮೈಯನ್ನು ಪ್ರವೇಶಿಸುತ್ತದೆ. ಆ ಶಕ್ತಿ ಸ್ತ್ರೀ ರೂಪಿಯಾಗಿದ್ದ ಕಾರಣ ಬೀರಣ್ಣಾಳ್ವ ಗಂಡಾಗಿದ್ದರೂ ಕೂಡ ಅವನಿಗೆ ಸ್ತ್ರೀ ರೂಪ ಉಂಟಾಗುತ್ತದೆ. ಮುಂದೆ ಆತ ಮಾಯವಾಗಿ 'ಬೀರ್ನಾಳ್ವ' ಎಂಬ ಹೆಸರಿನಿಂದ ಸ್ತ್ರೀ ದೈವವಾಗಿ ಆರಾಧಿಸಲ್ಪಡುತ್ತಾನೆ. ಇನ್ನೂ ಸಾಕಷ್ಟು ಈ ಪ್ರದೇಶದಲ್ಲಿ ಪ್ರಮುಖ ದೈವಗಳಿದ್ದು ನನಗೆ ಸಂಗ್ರಹಿಸಲು ಸಾಧ್ಯವಾಗಿರುವದನ್ನು ಮಾತ್ರ ಇಲ್ಲಿ ಉಲ್ಲೇಖಿಸಿರುತ್ತೇನೆ.

**ಮಾಹಿತಿದಾರರು**

1. ಪ್ರದೀಪ.ಪಿ.ಶೆಟ್ಟಿ ವಯಸ್ಸು– 55, ಜಾತಿ–ಬಂಟರು, ಹಂಪನಕಟ್ಟೆ, ಮಂಗಳೂರು. ದಿನಾಂಕ 18–12–2022.
2. ಮಧುಕೇಶ್ವರ ಎಸ್.ರೈ ವಯಸ್ಸು– 45, ಜಾತಿ–ಬಂಟರು, ಮುಲ್ಕಿ, ಮಂಗಳೂರು. ದಿನಾಂಕ 25–12–2022.
3. ಭಗಾವನ್. ಎಸ್. ಭಂಡಾರಿ ವಯಸ್ಸು– 58, ಜಾತಿ–ಭಂಡಾರಿ, ಕಾಸರಗೋಡ, ಮಂಗಳೂರು. ದಿನಾಂಕ 25–12–2022
4. ಸುಮನ್ ಆರ್. ಕಾಮತ್ ವಯಸ್ಸು– 43, ಜಾತಿ–ಕೊಂಕಣ ಬ್ರಾಹ್ಮಣ, ಮುಲ್ಕಿ, ಮಂಗಳೂರು. ದಿನಾಂಕ 25–12–2022
5. ಭಾಸ್ಕರ್ ವಾಯ್. ಶೆಣೈ ವಯಸ್ಸು– 55, ಜಾತಿ ಬ್ರಾಹ್ಮಣ, ಹಂಪನಕಟ್ಟೆ, ಮಂಗಳೂರು. ದಿನಾಂಕ 18–12–2022